<u>ಪಿಡಬ್ಲ್ಯೂ-1</u>

<u>ದಿನಾಂಕಃ **15-07-2026** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು ಪ್ರತಿವಾದಿ ನಂ.2 ಮತ್ತು 6 ರ ಪರವಾಗಿ ಶ್ರೀ ಎನ್.ಎಸ್.ಎಸ್. ವಕೀಲರಿಂದಃ-</u>

2 ನೇ ಪ್ರತಿವಾದಿಯ ಮದುವೆಯು 6 ನೇ ಪ್ರತಿವಾದಿಯ ಜೊತೆ ಆಗಿರುತ್ತದೆ. ಉಳಿದವರ ಮದುವೆಯಾದ ನಂತರ ನಾವೆಲ್ಲರೂ ಒಟ್ಟಿಗೆ ಇದ್ದೆವು. ಪ್ರತಿವಾದಿಯರು ಗಲಾಟೆ ಮಾಡಿದ ನಂತರ ನಾನು ನನ್ನ ಹೆಂಡತಿಯನ್ನು ಕರೆದುಕೊಂಡು ಮೈಸೂರಿನಲ್ಲಿ ವಾಸವಿದ್ದೆ. ನನಗೆ ದಾವಾಸ್ತಿಗಳಲ್ಲಿ ಭಾಗ ಕೊಟ್ಟಿಲ್ಲ. ಮುಟೇಶನ್ ಗಳು ನನಗೆ ಗೊತ್ತಿಲ್ಲದ ಹಾಗೆ ಆಗಿರುತ್ತವೆ. 10 ವರ್ಷಗಳಿಂದ ಮೈಸೂರಿನಲ್ಲಿ ಆಧಾರ್ ಕಾರ್ಡ್

ಮತ್ತು ಮತದಾರರ ಚೀಟಿ ಹೊಂದಿರುತ್ತೇನೆ. 2 ಮತ್ತು 6 ನೇ ಪ್ರತಿವಾದಿಯರ ಹೆಸರಿನಲ್ಲಿರುವ ಆಸ್ತಿಗಳು ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ನಾನು ಯಾವುದೇ ಆಸ್ತಿಗಳನ್ನು ಖರೀದಿಸಿಲ್ಲ. ಮೈಸೂರಿನ ಗೂಟಗಳ್ಳಿ ಆಸ್ತಿ 3 ನೇ ಪ್ರತಿವಾದಿಯ ಹೆಸರಿನಲ್ಲಿದ್ದು ಅದನ್ನು ಕೂಡ ಒಟ್ಟು ಕುಟುಂಬದಲ್ಲಿ ಖರೀದಿಸಲಾಗಿದೆ. ಜೆ.ಸಿ.ಬಿ ಮತ್ತು ಇಟಾಚಿ ಇತರೆ ಚರಾಸ್ತಿಗಳು ಕೂಡ ಒಟ್ಟು ಕುಟುಂಬದ ಆಸ್ತಿಗಳು. ಸರ್ಕಾರದ ಸೌಲಭ್ಯಗಳನ್ನು ಪಡೆಯುವುದಕ್ಕೋಸ್ಕರ ಮುಟೇಶನ್ ಮಾಡಿಸಿಕೊಳ್ಳುತ್ತಾರೆಂದರೆ ಸರಿ. ಒಟ್ಟು ಕುಟುಂಬಕ್ಕೆ ಜಾಸ್ತಿ ಆಸ್ತಿಗಳು ಇದ್ದರೆ ಸರ್ಕಾರದಿಂದ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಗಳನ್ನು ಬಿಟ್ಟರೆ ಬೇರೆ ಬೇರೆ ಆಸ್ತಿಗಳು ಅವರವರು ಸಂಪಾದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆದಾಯ ಎಷ್ಟಿತ್ತು ಎಂದು ತೋರಿಸಲು ಲೆಕ್ಕ ಪತ್ರ ಇಟ್ಟಿಲ್ಲ. ನಮ್ಮ ತಂದೆ ಮನೆಯ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು. ಒಟ್ಟು ಕುಟುಂಬದವರು ಬೇರೆ ಬೇರೆ ಆದ ನಂತರ ಅವರಸ್ವಂತ ಆದಾಯದ ಮೇಲೆ ಅವರ ಹೆಸರಿಗೆ ಆಸ್ತಿಗಳನ್ನು ಖರೀದಿಸಿದ್ದು ಒಟ್ಟು ಕುಟುಂಬದ ಆಸ್ತಿಗಳಲ್ಲಿ ಮಾತ್ರ ನನಗೆ ಭಾಗಾಂಶ ಇದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಖರೀದಿಸಿದ ಆಸ್ತಿಗಳನ್ನು ಬಿಟ್ಟರೆ ಇತರೆ ದಾವಾಸ್ತಿಗಳಲ್ಲಿ ಅವರಿಗೆ ಭಾಗದ ಹಕ್ಕು ಇದೆ ಎಂದರೆ ಸಾಕ್ಷಿ ಎಲ್ಲಾ ಆಸ್ತಿಗಳಲ್ಲೂ ಅವರಿಗೆ ಹಕ್ಕು ಇದ್ದು ಅವರ ಹೆಸರಿನಲ್ಲಿ ಒಟ್ಟು ಕುಟುಂಬದಿಂದ ಆಸ್ತಿಗಳನ್ನು ಖರೀದಿಸಿರುತ್ತಾರೆಂದು ನುಡಿಯುತ್ತಾರೆ. ಎಲ್ಲಾ ಆಸ್ತಿಗಳಲ್ಲಿ 2 ನೇ ಪ್ರತಿವಾದಿಗೆ ಭಾಗ ಕೊಡಲು ನನಗೆ ಅಭ್ಯಂತರ ಇಲ್ಲ. ಉದ್ದೇಶಪೂರ್ವಕವಾಗಿ 2 ನೇ ಪ್ರತಿವಾದಿಯ ಆಸ್ತಿಗಳನ್ನು ಸೇರಿಸಿ ಈ ದಾವೆಯನ್ನು ಹಾಕಿರುತ್ತೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು ಪ್ರತಿವಾದಿ ನಂ.3 ಮತ್ತು 7 ರ ಪರವಾಗಿ ಶ್ರೀ ಹೆಚ್.ಎಸ್.ಕೆ. ಎನ್.ಎಸ್.ಎಸ್. ವಕೀಲರಿಂದಃ-</u>

ನಾನು ಎಂ.ಎ. ಎಲ್.ಎಲ್.ಬಿ. ಪಧವೀದರ. ನಾನು 2003 ರಲ್ಲಿ ಮಂಡ್ಯದ ಕೆ.ಆರ್. ಪೇಟೆಗೆ ಹೋಗಿ ನೆಲೆಸಿದ್ದು 2016 ರಲ್ಲಿ ನಾನು ಮೈಸೂರಿಗೆ ಹೋಗಿ ನೆಲೆಸಿದ್ದೆ. 2016 ರವರೆಗೂ ನಾವೆಲ್ಲಾ ಒಂದೇ ಮನೆಯಲ್ಲಿದ್ದೆವು. ನಾನು ಮೈಸೂರಿನಲ್ಲಿ ನೆಲೆಸಿದ ಕಾರಣ ನಮ್ಮ ಊರಿನ ಪಡಿತರ ಚೀಟಿ ಮತ್ತು ಮತದಾರರ

ಚೀಟಿ ರದ್ದುಗೊಂಡಿರುತ್ತದೆ. ನನ್ನನ್ನು ಬಿಟ್ಟು ಉಳಿದ ನನ್ನಅಣ್ಣ ತಮ್ಮಂದಿರು ಕ್ಯಾತನಹಳ್ಳಿಯಲ್ಲಿ ಒಂದೇ ಮನೆಯಲ್ಲಿ ವಾಸವಿದ್ದರು ಎಂದು ತೋರಿಸುವ ದಾಖಲೆ ನನ್ನ ಬಳಿ ಇಲ್ಲ. ಈ ದಾವೆ ಹಾಕಿದ ನಂತರವೂ ಆ ದಾಖಲೆಗಳನ್ನು ಪಡೆಯಲು ಪ್ರಯತ್ನಿಸಿಲ್ಲ. ದಾವೆ ಹಾಕುವಾಗ 1, 3 ಮತ್ತು 4 ನೇ ಪ್ರತಿವಾದಿಗಳು ಒಂದು ಮನೆಯಲ್ಲಿ 2 ನೇ ಪ್ರತಿವಾದಿ ಬೇರೆ ಮನೆಯಲ್ಲಿ ವಾಸವಿದ್ದರು. ಈ ರೀತಿ ಅವರುಗಳು 2003-04 ರಿಂದ ವಾಸವಿದ್ದಾರೆ. ಒಟ್ಟುಕುಟುಂಬದಲ್ಲಿ ಜನರು ಹೆಚ್ಚಿಗೆ ಇದ್ದು, ಆದಾಯ ಕಡಿಮೆ ಇದೆ ಆ ಕಾರಣದಿಂದ ಕೆ.ಆರ್. ಪೇಟೆಗೆ ಸಂಪಾದನೆ ಮಾಡಲು ನಾನು ಹೋಗಿದ್ದೆ ಎಂದರೆ ಸಾಕ್ಷಿ ಒಟ್ಟುಕುಟುಂಬಕ್ಕಾಗಿ ಸಂಪಾದನೆ ಮಾಡಲು ಹೋಗಿದ್ದೆ ಎಂದು ಹೇಳುತ್ತಾರೆ. ಆಗ ಮನೆಯ ವ್ಯವಹಾರವನ್ನು ನನ್ನ ತಂದೆ ಮಾಡುತ್ತಿದ್ದರು. ಕೆ.ಆರ್. ಪೇಟೆ ಮಿಷನರಿ ತೆಗೆದುಕೊಂಡು ಬಾಡಿಗೆ ಕೊಡಬೇಕೆಂದು ಹೋಗಿದ್ದೆ. ಮಿಷನರಿ ಎಂದರೆ ಟಾಟಾ ಇಟಾಚಿ, ಟಿಪ್ಪರ್, ಜೆ.ಸಿ.ಬಿ. ಗಳು. ಸದರಿ ಮಿಶನರಿಗಳನ್ನು 3 ನೇ ಪ್ರತಿವಾದಿಯ ಹೆಸರಿಗೆ ಖರೀದಿಸಿದೆವು. ಲೋನ್ ಕೂಡ ಆತನ ಹೆಸರಿಗೆ ಆಗಿರುತ್ತದೆ. ನನ್ನ ಮತ್ತು 3 ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿ ಲೋನ್ ಪಡೆಯಲು ತೊಂದರೆ ಇರಲಿಲ್ಲ ಆದರೆ ಸಾಲ ಮರು ಪಾವತಿಯನ್ನು ನಾನು ಮಾಡಿರುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ನಮ್ಮ ವಕೀಲರಿಗೆ ದಾವೆ ಸಲ್ಲಿಸುವಾಗ ಒಟ್ಟುಕುಟುಂಬದ ಆದಾಯವನ್ನು ಡೌನ್ ಪೇಮೆಂಟ್ ಮಾಡಿ ಮಿಷನರಿಗಳನ್ನು ಖರೀದಿಸಲು 3 ನೇ ಪ್ರತಿವಾದಿಯ ಹೆಸರಿನಲ್ಲಿ ಸಾಲ ಪಡೆದಿರುವ ಬಗ್ಗೆ ಮಾಹಿತಿ ಕೊಟ್ಟಿರುತ್ತೇನೆ. 2003 ರಿಂದ 2014 ರವರೆಗೆ ಗುತ್ತಿಗೆದಾರನಾಗಿ ಲೈಸನ್ಸ್ ಪಡೆದಿದ್ದೆ. ಆ ಬಗ್ಗೆ ದಾಖಲೆಗಳು ನನ್ನ ಬಳಿ ಇಲ್ಲ. ಯಾರಾದರೂ ಲೈಸನ್ಸ್ ಪಡೆದು ಗುತ್ತಿಗೆದಾರನಾದರೆ ಆ ಬಗ್ಗೆ ದಾಖಲೆಗಳು ಇರುತ್ತವೆ ಎಂದರೆ ಸರಿ. ಮೇಲೆ ಹೇಳಿದ 3 ನೇ ಪ್ರತಿವಾದಿಯ ಹೆಸರಿಗೆ ಮಿಶನರಿಗಳನ್ನು ಒಟ್ಟು ಕುಟುಂಬದ ಪರವಾಗಿ ಖರೀದಿಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಪರವಾಗಿ ನಮ್ಮ ತಂದೆಯ ಹೆಸರಿಗೆ ಬ್ಯಾಂಕ್ ಖಾತೆ ಇತ್ತು. ನಮ್ಮ ತಂದೆ ಊರಿನಲ್ಲಿರುವ ಟ್ರಾಕ್ಟರ್ ಮತ್ತು ಟ್ರೇಲರ್ ಖರೀದಿಸಲು ಸಾಲ ಮಾಡಿರಲಿಲ್ಲ ಅವುಗಳು ನಮ್ಮ ತಾತನ ಕಡೆಯಿಂದ ನಮ್ಮ ತಂದೆಗೆ ಬಂದಿದ್ದವು. ನಮ್ಮ

ತಂದೆಯ ಬ್ಯಾಂಕ್ ಖಾತೆಯಲ್ಲಿ ಒಟ್ಟು ಕುಟುಂಬದ ಆದಾಯದಲ್ಲಿ ಜಮಾ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ಕೆ.ಆರ್. ಪೇಟೆಯಲ್ಲಿ 10 ವರ್ಷಗಳ ಕಾಲ ಇದ್ದೆ. ಮೊದಲು ಅಲ್ಲಿಗೆ ಹೋದ ಹೊಸದರಲ್ಲಿ ನಾನು ಮತ್ತು 3 ನೇ ಪ್ರತಿವಾದಿ ಒಟ್ಟಿಗೆ ಇದ್ದೆವು. ಆತ ಮದುವೆಯಾದ ನಂತರ ಆತ ಬೇರೆ ವಾಸವಿದ್ದ. 3 ನೇ ಪ್ರತಿವಾದಿ ಕೆ.ಆರ್ ಪೇಟೆಗೆ 1996-97 ನೇ ಇಸವಿಗೆ ಹೋಗಿರುತ್ತಾರೆ 3 ನೇ ಪ್ರತಿವಾದಿ ಆಗ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. ಆತ ಕ್ಯಾತನಹಳ್ಳಿ ಬಿಟ್ಟು ಕೆ.ಆರ್. ಪೇಟೆಗೆ ಯಾವ ಉದ್ದೇಶಕ್ಕಾಗಿ ಹೋಗಿದ್ದ ಎಂದು ನಾನು ತಿಳಿದುಕೊಳ್ಳಲಿಲ್ಲ. ಆತ ಕೆ.ಆರ್. ಪೇಟೆಗೆ ಹೋಗಿ ಗುತ್ತಿಗೆ ಲೈಸನ್ಸ್ ಪಡೆದು, ಮಿಶನರಿ ಖರೀದಿ ಮಾಡಿ ಸ್ವಂತ ದುಡಿಮೆ ಮಾಡಿರುತ್ತಾರೆಂದರೆ ಸಾಕ್ಷಿ ಒಟ್ಟು ಕುಟುಂಬದ ಪರವಾಗಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಆತ ಕೆ.ಆರ್. ಪೇಟೆಗೆ ಹೋಗುವ ಮುಂಚೆ ನಮ್ಮ ತಂದೆ ನಮ್ಮ ಎಲ್ಲಾ ಗಂಡು ಮಕ್ಕಳಿಗೆ ವಿಭಾಗ ಮಾಡಿ ಆಸ್ತಿ ಹಂಚಿದ್ದರು ಎಂದರೆ ಸರಿಯಲ್ಲ. ಆಗಲೇ ನಮ್ಮೆಲ್ಲರ ಹೆಸರಿಗೆ ವಿಭಾಗದಂತೆ ಖಾತಾ ವರ್ಗಾವಣೆ ಆಗಿದೆ ನನಗೆ ಗೊತ್ತಿಲ್ಲ. ಕ್ಯಾತನಹಳ್ಳಿಯ ಸರ್ವೆ ನಂ. 15/1ಪಿ ರಲ್ಲಿ 1 ಎಕರೆ 16 ಗುಂಟೆ ವಿಭಾಗದಂತೆ ನನ್ನ ಹೆಸರಿಗೆ ಖಾತಾ ವರ್ಗಾವಣೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ತನಗೆ ಬಂದ ಭಾಗದ ಆಸ್ತಿಯಲ್ಲಿ ಹೆಚ್ಚಿನ ಆದಾಯ ಬರುವುದಿಲ್ಲ ಎಂದು 3 ನೇ ಪ್ರತಿವಾದಿ ಕೆ.ಆರ್. ಪೇಟೆಗೆ ಹೋಗಿ ಸ್ವಂತ ದುಡಿಮೆ ಆರಂಭಿಸಿದರು ಎಂದರೆ ಸರಿಯಲ್ಲ. ನಾನು ಕೆಲಸ ಇಲ್ಲದೇ ಇದ್ದಾಗ 3 ನೇ ಪ್ರತಿವಾದಿ ಕೆ.ಆರ್. ಪೇಟೆಗೆ ಹೋಗಿ 6-7 ವರ್ಷಗಳ ನಂತರ ನನ್ನನ್ನು ಆತನ ಸಹಾಯಕನಾಗಿ ಕೆಲಸಕ್ಕೆ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ನಾನು ಯಾವುದೇ ಮಿಶನರಿಗಳನ್ನು ಖರೀದಿ ಮಾಡಿಲ್ಲ. ನಾನು ಸ್ವಂತ ದುಡಿಮೆಯಿಂದ ಯಾವುದೇ ಆಸ್ತಿಗಳನ್ನು ಖರೀದಿಸಿಲ್ಲ. ನಾನು ಮೈಸೂರಿಗೆ ನನ್ನ ಮಗಳ ವಿದ್ಯಾಭ್ಯಾಸಕ್ಕಾಗಿ ಜೀವನೋಪಾಯಕ್ಕಾಗಿ ಹೋದೆ. ಅಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದೆ. ನಾನು ಕೆಂಪರಾಜು ಎನ್ನುವ ಗುತ್ತಿಗೆದಾರರ ಬಳಿ ಸೂಪರ್ವೈಸರ್ ಆಗಿ ಕೆಲಸ ಮಾಡುತ್ತಿದ್ದೆ. ಆ ಬಗ್ಗೆ ಅವರು ಬ್ಯಾಂಕ್ ಖಾತೆ ಮತ್ತು ನನಗೆ ಮನೆ ಮಾಡಿಕೊಟ್ಟಿರುವ ಬಗ್ಗೆ ದಾಖಲೆ ಇವೆ. ನಾನು ಕೆ.ಎ.ಎಸ್. ಪರೀಕ್ಷೆಗೆ ತಯಾರಿ

ಮಾಡಿಕೊಳ್ಳುತ್ತಿರುವ ಕಾರಣ ನಾನು 3 ನೇ ಪ್ರತಿವಾದಿಗಿಂತ ಹಿರಿಯವನಿದ್ದರು ನನ್ನ ಹೆಸರಿಗೆ ಲೈಸನ್ಸ್ ಪಡೆದುಕೊಂಡಿಲ್ಲ ಹಾಗೂ ಮಿಶನರಿ ಖರೀದಿಸಿಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಅವುಗಳನ್ನು ಖರೀದಿಸಲು ತೊಂದರೆ ಇರಲಿಲ್ಲ. 1986 ರಿಂದ 1994 ರವರೆಗೆ ಕೆ.ಎ.ಎಸ್. ಪರೀಕ್ಷೆಗೆ ತಯಾರಿ ಮಾಡಿಕೊಳ್ಳುತ್ತಿದ್ದೆ ಆದರೆ ಅದರಲ್ಲಿ ವಿಫಲನಾದೆ. ನಾನು 1994 ರಿಂದ 2003-04 ರವರೆಗೆ ನಾನು ಕ್ಯಾತನಹಳ್ಳಿಯ ಒಟ್ಟು ಕುಟುಂಬದಲ್ಲಿಯೇ ಇದ್ದೆ. ನಮ್ಮ ಕುಟುಂಬದಲ್ಲಿ ನಾನೇ ಹೆಚ್ಚಿನ ವಿದ್ಯಾಭ್ಯಾಸ ಮಾಡಿರುತ್ತೇನೆಂದರೆ ಸರಿ. ಆಗ ಒಟ್ಟು ಕುಟುಂಬದ ಆಸ್ತಿಗಳ ದಾಖಲೆಗಳನ್ನು ತೆಗೆಸಿ ನೋಡುತ್ತಿರಲಿಲ್ಲ. ಸರ್ವೆ ನಂ.15/1ಪಿ ರ 1 ಎಕರೆ 16 ಗುಂಟೆಯನ್ನು ದಾವೆಯಲ್ಲಿ ಸೇರಿಸಿರುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಅದು ದಾವೆಯ ಎಷ್ಟನೇ ಐಟಂ ಎಂದು ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಕೃಷಿ ಜಮೀನುಗಳನ್ನು ಬಿಟ್ಟರೆ ಮನೆಗಳು ಇವೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

(ಈ ಹಂತದಲ್ಲಿ ಮುಂದವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **15-07-2026.**